ಮೇಯಿಸಿಕೊಂಡು ಬರೊವಾಗ, ಬುಡ್ಡನಕಟ್ಟೆತಾವ ನೀರು ಕುಡಿಸೋಕೆ ಹೋದೆ. ಅಲ್ಲಿಗೆ ಅಜ್ಜಪ್ಪನಹಟ್ಟಿಯ ಈರಪ್ಪನ ಪಾಲು ಬಂದಿದ್ವು. ಅಲ್ಲೇ ಏನಾದರೂ ಕಲೆತವ್ರೊ ಏನೋ! ನೀನು ಹೇಳೋದೂ ಸರಿ ಐತೆ' ಎಂದು ತಮ್ಮ ಬಿಳಿಕುರಿ ಅಲ್ಲೇ ಅವನ ಕುರಿಗಳ ಜೊತೆಯಲ್ಲಿ ಹೋಗಿರಬೋದು ಎಂದು ಊಹಿಸಿ ದೃಢವಾದ ಮಾತುಗಳಿಂದ ಹೇಳಿದ.

ಅಪ್ಪ ಅಷ್ಟು ಖಚಿತವಾಗಿ ಹೇಳುತ್ತಿದ್ದ ಹಾಗೆ ಸಣ್ಣತಿಮ್ಮಯ್ಯ 'ಅಂಗಾದರೆ ಈಗಲೇ ಅಜ್ಜಪ್ಪನಹಟ್ಟಿಗೆ ಹೋಗಿ ನಮ್ಮ ಕುರಿ ಐತೋ, ಇಲ್ಲವೋ ಅಂತ ನೋಡಿ ಕೊಂಡು ಬತ್ತೀನಿ' ಎಂದು ಹೆಗಲಮೇಲಿದ್ದ ವಲ್ಲಿಯನ್ನು ಸರಿಮಾಡಿಕೊಂಡು ಚೂಡಿ ಹಿಡಿದು ಮೇಲೆದ್ದ. ಅವನ ಆತುರ ನೋಡಿ ಗಿರಿಗೌಡ 'ಈಟೋತ್ತಿನಾಗೆ ಅಜ್ಜಪ್ಪನಹಟ್ಟಿಗೆ ಹೋಗೋದು ಸರಿಯಲ್ಲ ಕಣೋ. ಆ ಈರಪ್ಪ ಒಳ್ಳೆ ಗ್ರಾಸ್ಥ ಅಲ್ಲ! ಹೊತ್ತಿನೊಂಟೆ ಎದ್ದು ಹೋಗಿವಂತೆ, ಈಗ ಹಿಟ್ಟುಂಡು ಮಲಗು ಬಾ' ಎಂದು ಹೇಳಿ ಹಟ್ಟಿಕಡೆ ಹೆಜ್ಜೆಹಾಕಿದ. ಇಂದಿನ ರಾತ್ರಿಯನ್ನು ಹೇಗೆ ಕಳೆಯುವುದು ಎಂಬ ಚಿಂತೆಯಿಂದ, ಅಪ್ಪನ ಮಾತನ್ನು ಮೀರಲಾರದೆ ಸಣ್ಣತಿಮ್ಮಯ್ಯ ಹಿಟ್ಟುಂಡು ಬರಲು ಅಪ್ಪನ ಹಿಂದೆಯೇ ಹೊರಟ.

* * *

ಸಣ್ಣತಿಮ್ಮಯ್ಯನ ಒಳಗೆ ನೋವು ಮಡುಗಟ್ಟಿದ್ದರೂ ಯಾತನೆಯ ಕ್ಷಣಗಳು ಉರುಳಿ ಬೆಳಗಾಯಿತು... ಅಜ್ಜಪ್ಪನಹಟ್ಟಿಗೆ ಎದುರಾಗಿ ಕೆರೆಗೆ ಮುಖನಾಗಿ ಹೋಗುವ ದಾರಿಯಲ್ಲಿ ಅಂದು ಬೆಳಗ್ಗೆ ಸಣ್ಣತಿಮ್ಮಯ್ಯ ಹೊರಟ. ಈರಪ್ಪನ ಕುರಿಗೂಡಿನಲ್ಲಾದರೂ ಬಿಳಿಕುರಿ ಇದ್ದರೆ ಮೆರೆದೇವರಿಗೆ ಪೂಜೆಕಟ್ಟಿಸುತ್ತೇನೆ ಎಂದು ಮನಸ್ಸಿನಲ್ಲೇ ಮೀಸಲು ಕಟ್ಟಿಕೊಂಡ. ದಾರಿ ಸಾಗುತ್ತಿದ್ದಹಾಗೆ ಗಿರಿಂಡೆಗುಡ್ಡ, ಬುಡ್ಡನಕಟ್ಟೆಗಳ ಮೇಲಿನಿಂದ ಬೀಸುತ್ತಿದ್ದ ತೆಳುಗಾಳಿ ಇವನ ಕಾಲಿನ ರಭಸವನ್ನು ಹೆಚ್ಚು ಮಾಡಿತು. ಎಷ್ಟುಹೊತ್ತಿಗೆ ತನ್ನ ಪರಮವನ್ನು ನೋಡುತ್ತೇನೋ ಎಂದುಕೊಂಡು ಅಜ್ಜಪ್ಪನಹಟ್ಟಿ ಬಳಿಯಲ್ಲಿದ್ದ ಚಿಕ್‌ಕಟ್ಟೆ ಸಮೀಪಕ್ಕೆ ಬಂದ. ಹಟ್ಟಿಯ ಉದಿಬಾಗಿಲಿನ ಮೂಲಕ ಹೋಗುವುದು ಬೇಡ ಎಂದು, ಹೊಲಗುತ್ತಿಯ ಮೂಲಕ ಹೊರಟ. ಹೀಗೆ ಹೋಗುತ್ತಿರುವಾಗ ಹೊಲಗುತ್ತಿಯ ಒಂದು ಮೂಲೆಯಲ್ಲಿ ಸಣ್ಣಗುಡ್ಡೆಯಲ್ಲಿ ಇದ್ದಿಲು ಮತ್ತು ಬೂದಿಯ ರಾಶಿ ಕಂಡಿತು. ಹಾಗೆಯೇ ಅಲ್ಲಿನ ಒಣಗಿದ ಗರಿಕೆಹುಲ್ಲು ಬೆಂಕಿ ತಾಗಿ ಸೀದುಹೋಗಿತ್ತು! ಹಾಗೆಯೇ ಬೂದಿರಾಶಿಯ ಹತ್ತಿರ ಹೋದ. ಬಗ್ಗಿ ಬೂದಿರಾಶಿಯ ಮೇಲೆ ಕೈಯಿಟ್ಟ. ಬೂದಿ ಬಿಸಿಯಾಗಿತ್ತು. ಪ್ರಯತ್ನವಿಲ್ಲದೆ ಅವನ ಕಣ್ಣುಗಳು ಅಲ್ಲಿನ ನೆಲದ ಮೇಲೆಲ್ಲಾ ಹರಿದಾಡಿತು. ಅವನ ಕಾಲುಗಳ ಕೆಳಗೆ ಏನೋ ತಣ್ಣಗೆ ಹರಿದಂತಾಯಿತು. ಕಾಲು ಮೇಲೆತ್ತಿ ಅಂಗಾಲನ್ನು ನೋಡಿಕೊಂಡ. ಏನೂ ಇರಲಿಲ್ಲ! ಇನ್ನೊಮ್ಮೆ ಕಾಲೂರಿ ನಡೆಯುವಾಗ ಮತ್ತೊಮ್ಮೆ ಕಾಲಕೆಳಗೆ ಏನೋ ತಣ್ಣಗೆ ಹರಿದಂತಾಯಿತು. ಮರಳಿ ಅಂಗಾಲನ್ನು ನೋಡಿಕೊಂಡ. ಹಸಿರಕ್ತ ಅವನ ಅಂಗಾಲಿಗೆ ಮೆತ್ತಿಕೊಂಡಿತ್ತು. ಮತ್ತೆ ಕಾಲೂರಿ ಕಾಲಿನ ಹೆಬ್ಬೆಟ್ಟಿನಿಂದ ನೆಲ ಕೆರೆದ. ಏನೊಂದೂ ಕಾಣಲಿಲ್ಲ! ಆದರೂ ಈ ರಕ್ತ ಯಾವುದು ಎಂದು ಕೇಳಿಕೊಂಡ. ಏಕೋ ಅವನ ಮುಖದಲ್ಲಿ ದುಃಖದ ಅಲೆಗಳು ಏಳತೊಡಗಿದವು. ಇನ್ನೆರೆಡು ಹೆಜ್ಜೆ ಮುಂದೆ ಬಂದ. ಅದೇ ರಕ್ತ ಅವನ ಕಾಲಿಗೆ ಅಂಟಿಕೊಂಡು ಅವನೊಡನೆ ಹೊರಟಿತು. ಅಲ್ಲಿ ಒಣಗಿದ ಗರಿಕೆ ಹುಲ್ಲಿನ ನಡುವೆ ಅಲ್ಲಲ್ಲಿ ತೆಳುವಾಗಿ ಬಿದ್ದಿದ್ದ ಕುರಿಬಂಡು (ಕುರಿ ತುಪ್ಪಟ) ಹಾಗೂ ಕೆಲವು ಕಡೆ ಸೀದ ಪುಟ್ಟ ಗೊರಸು ಗೋಚರಿಸಿತು. ಅಲ್ಲಿನ ಗಾಳಿಯೊಡನೆ ಬೆರೆತಿದ್ದ ಕಮಟು ವಾಸನೆಯನ್ನು ಅವನ ಮೂಗು ಹಿಡಿಯಿತು. ಅನುಮಾನ ಹೆಚ್ಚಾಯಿತು. ಕುರಿಬಂಡನ್ನು ಕೈಯಲ್ಲಿ ತಗೆದುಕೊಂಡು ನೋಡಿದ. ಅವನ ಹೃದಯ ಹಿಂಡಿದಂತಾಯಿತು. ಅದು ಅವನ ಬಿಳಿಕುರಿಯ ಬಂಡು. ಅದನ್ನು ನೋಡುತ್ತಿದ್ದ ಹಾಗೆ ಅವನ ನಂಬಿಕೆಯ ಕುರಿಗೂಡು ಬಿರುಗಾಳಿಗೆ ಸಿಕ್ಕಿ ದೂಳೆಬ್ಬಿಸಿ ಬರಿದಾದ ಆಕಾಶದ ಕಡೆ ಹಾರಿತು. ಕಣ್ಣಿನ ನೇರಕ್ಕಿದ್ದ ಬಂಡಿನ ಮೂಲಕ ಅವನ ಬಿಳಿಕುರಿ ಓಡೋಡಿ ಬಂದು ಮುಂಗಾಲುಗಳ ಮೇಲೆ ನಿಂತು ಅವನ ಮುಖವನ್ನು ನಾಲಗೆಯಿಂದ ಸವರತೊಡಗಿತು. ಅದರ ಎರಡೂ ಕಣ್ಣುಗಳಲ್ಲಿ ಬೆಳಕು ಜ್ಯೋತಿಯಂತೆ ಬೆಳಗುತ್ತಿತ್ತು. ಬಿಳಿಕುರಿಯ ಅಪ್ಪುಗೆಯಿಂದ ಮೈಮರೆತಿದ್ದ ಸಣ್ಣತಿಮ್ಮಯ್ಯನ ಎರಡೂ ಕಣ್ಣುಗಳು ನೀರಿನಲ್ಲಿ ಮುಳುಗಿದ್ದವು. ತಾಯಿಯ ಮಡಿಲು